**ಓ.ಎಸ್. ನಂಃ 179/2010**
**ಪಿ.ಡಬ್ಲ್ಯೂಃ 3**

ದಿನಾಂಕ **04.09.2024** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ಃ ಶ್ರೀ ಎಂ.ಕೆ.ವಿ.ಎ ವಕೀಲರಿಂದಃ

ವಾದಿ ನನಗೆ ಅಧಿಕಾರ ಪತ್ರ ಮಾಡಿಕೊಟ್ಟಿದ್ದಾರೆ. ಸದರಿ ಅಧಿಕಾರ ಪತ್ರವನ್ನು ನಮ್ಮ ಮನೆಯಲ್ಲಿ ನೋಟರಿ ಮಾಡಿಸಿರುತ್ತೇವೆ. ನನ್ನ ತಂದೆಯ ಆರೋಗ್ಯ ಸರಿ ಇಲ್ಲ ಎಂಬುದನ್ನು ತೋರಿಸಲು ನಾನು ಆಸ್ಪತ್ರೆಯ ದಾಖಲೆಗಳನ್ನು ಹಾಜರು ಮಾಡಿಲ್ಲ. ಅಧಿಕಾರ ಪತ್ರವನ್ನು ನಮ್ಮ ವಕೀಲರು ಬರೆದಿದ್ದಾರೆ. ಯಾವ ವಕೀಲರು ಬರೆದಿದ್ದಾರೆ ಎಂದರೆ ಎಸ್.ಹಣಮಂತಪ್ಪ ವಕೀಲರು ಬರೆದಿದ್ದಾರೆ ಎಂದು ಸಾಕ್ಷಿ ನುಡಿದಿದ್ದಾರೆ. ಅದನ್ನು ಬರೆಯುವಂತೆ ಯಾರು ತಿಳಿಸಿದ್ದಾರೆ ಎಂದರೆ ಸಾಕ್ಷಿಯು ನಾವೇ ತಿಳಿಸಿದ್ದೇವು ಎಂದು ನುಡಿಯುತ್ತಾರೆ. ನಿಪಿ-24 ರ ಒಟ್ಟು ಮುಕ್ತಿಯಾರ ಪತ್ರದ ಮೊದಲ ಪುಟದಲ್ಲಿ ವಾದಿಯ ಸಹಿ ಇಲ್ಲ ಎಂದರೆ ಸರಿ. ಅದೇ ರೀತಿ 2 ನೇ ಪುಟದಲ್ಲಿಯೂ ಸಹ ವಾದಿಯ ಸಹಿ ಇಲ್ಲ ಎಂದರೆ ಸರಿ. ಆದ್ದರಿಂದ ನಿಪಿ-24 ರ ಪತ್ರ ಕಾನೂನಿನ ಪ್ರಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

2. ನಾನು ಈ ಪೂರ್ವದಲ್ಲಿ ಇದೇ ದಾವೆಯಲ್ಲಿ, ಇದೇ ನ್ಯಾಯಾಲಯದಲ್ಲಿ ಸಾಕ್ಷ ನುಡಿದಿದ್ದೇನೆ ಎಂದರೆ ಸರಿ. ನಾನು ಕೆಲವೊಂದು ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿ. ಮಲ್ಲಪ್ಪ ಎಂಬುವವರು ಮಹಾದೇವಪ್ಪ ಎಂಬುವವರಿಗೆ ಮಾಡಿಕೊಟ್ಟಿರುವ ನಿಪಿ-25 ರ ಖರೀದಿ ಪತ್ರಕ್ಕು ಹಾಗೂ ಈ ದಾವೆಗೂ ಹೇಗೆ ಸಂಬಂಧ ಎಂದರೆ ಸಾಕ್ಷಿಯು ಅದು ನಮ್ಮ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. ಮಲ್ಲಪ್ಪ ಎಂಬುವವರು ಗುಂಡಪ್ಪ ಎಂಬುವವರಿಗೆ ಮಾಡಿಕೊಟ್ಟಿರುವ ನಿಪಿ-26 ರ ಖರೀದಿ ಪತ್ರಕ್ಕು ಹಾಗೂ ಈ ದಾವೆಗೂ ಹೇಗೆ ಸಂಬಂಧ ಎಂದರೆ ಸಾಕ್ಷಿಯು ಅದು ನಮ್ಮ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. ನಿಪಿ-27 ರ ಲಾವಣಿ ಪತ್ರಿಕೆಯಲ್ಲಿ ನಮೂದು ಇರುವ ಸರ್ವೆ ನಂ.209 ಮತ್ತು 77 ಯಾರಿಗೆ ಸಂಬಂಧಿಸಿದ ಆಸ್ತಿಗಳು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-27 ರ ದಾಖಲೆಯನ್ನು ಯಾವ ಕಚೇರಿಯಿಂದ ಪಡೆದುಕೊಂಡು ಬಂದಿದ್ದೀರಿ ಎಂದರೆ ಸಾಕ್ಷಿಯು ಅದು ಸಹ ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ.

3. ನಿಪಿ-28 ರ ಲಾವಣಿ ಪತ್ರಿಕೆಯಲ್ಲಿ ನಮೂದು ಇರುವ ಸರ್ವೆ ನಂ.220/ಅ ಯಾರಿಗೆ ಸಂಬಂಧಿಸಿದ ಆಸ್ತಿಗಳು ಎಂದರೆ ಸಾಕ್ಷಿಯು ಅದು ನನ್ನ ತಾತನ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಸದರಿ ಜಮೀನು ಸಾಬಣ್ಣ ತಂದೆ ಹೊನ್ನಪ್ಪ ಎಂಬುವವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ-28 ರ ದಾಖಲೆಯನ್ನು ಯಾವ ಕಚೇರಿಯಿಂದ ಪಡೆದುಕೊಂಡು ಬಂದಿದ್ದೀರಿ ಎಂದರೆ ಸಾಕ್ಷಿಯು ಅದು ಸಹ ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. ನಿಪಿ-29 ರ ಲಾವಣಿ ಪತ್ರಿಕೆಯಲ್ಲಿ ನಮೂದು ಇರುವ ಸರ್ವೆ ನಂ.237, 240 ಮತ್ತು 236 ಯಾರಿಗೆ ಸಂಬಂಧಿಸಿದ ಆಸ್ತಿಗಳು ಎಂದರೆ ಸಾಕ್ಷಿಯು ಅದು ನರಸಪ್ಪ ರವರಿಗೆ ಸಂಬಂಧಿಸಿದ ಆಸ್ತಿಗಳು ಎಂದು ನುಡಿಯುತ್ತಾರೆ. ಈ ದಾವೆಗೂ ಹಾಗೂ ಸದರಿ ಜಮೀನುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಸರ್ವೆ ನಂಬರುಗಳ ಬಗ್ಗೆಯೂ ದಾವೆಯಲ್ಲಿ ನಮೂದು ಮಾಡಿದ್ದೇವೆ. ಸದರಿ ನಿಪಿ-29 ರ ದಾಖಲೆಯನ್ನು ಯಾವ ಕಚೇರಿಯಿಂದ ಪಡೆದುಕೊಂಡು ಬಂದಿದ್ದೀರಿ ಎಂಬ ಬಗ್ಗೆ ಅದರಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಅದು ಸಹ ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ.

4. ದಾವಾ ಆಸ್ತಿ ಸರ್ವೆ ನಂ.3 ಇರುತ್ತದೆ. ನಿಪಿ-30 ರಲ್ಲಿನ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ-30 ರಲ್ಲಿನ ಆಸ್ತಿ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿನ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಿಪಿ-31 ರಲ್ಲಿನ ಸರ್ವೆ ನಂ.96 ರ ಜಮೀನು ಯಾರಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಅದು ಹಣಮಂತಪ್ಪ ರವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ನಿಪಿ-31 ರ ದಾಖಲೆಯನ್ನು ನಾವು ಹಿಂದೆಯೇ ನಿಪಿ-4 ಎಂದು ಗುರುತಿಸಿಕೊಂಡಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನಾವು ಉದ್ದೇಶಿಪೂರ್ವಕವಾಗಿ ಮತ್ತೊಮ್ಮೆ ಅದೇ ಸರ್ವೆ ನಂಬರಿನ ಪಹಣಿ ಪತ್ರಿಕೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-32 ರಲ್ಲಿನ ಸರ್ವೆ ನಂಬರು 91 ರ ಜಮೀನು ರವಿಕುಮಾರ ರವರ ಹೆಸರಿನಲ್ಲಿ ಇದೆ. ಅದು ರವಿಕುಮಾರ ರವರು ಖರೀದಿ ಮಾಡಿರುವ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ಅದು ನನ್ನ ತಾತನ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಅದು ನನ್ನ ತಾತನ ಆಸ್ತಿ ಆಗಿರುತ್ತದೆ ಎಂಬುದನ್ನು ತೋರಿಸಲು ನಾನು ದಾಖಲೆ ಹಾಜರು ಮಾಡಿದ್ದೇನೆ. ನಿಪಿ-33 ರಲ್ಲಿನ ಸರ್ವೆ ನಂಬರು 75 ರ ಜಮೀನು ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ನೆನಪಿಲ್ಲ.

ಸದರಿ ಆಸ್ತಿಗೂ ಮತ್ತು ಈ ದಾವೆಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

5. ನಿಪಿ-34 ರಲ್ಲಿನ ಸರ್ವೆ ನಂಬರು 03 ರ ಜಮೀನು ನಮಗೆ ಸೇರಿರುತ್ತದೆ. ಸರ್ವೆ ನಂಬರು 3 ರಲ್ಲಿನ 20 ಎಕರೆ 07 ಗುಂಟೆ ಜಮೀನನ್ನು ಹೊನ್ನಪ್ಪ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದು ಹೊನ್ನಪ್ಪ ಸ್ವಂತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಹೊನ್ನಪ್ಪ ಗ್ರಾಮಲೆಕ್ಕಾಧಿಕಾರಿ (ಕುಲಕರ್ಣಿ) ಆಗಿದ್ದರು ಹಾಗೂ ತನ್ನ ಸ್ವಂತ ಆದಾಯದಿಂದ ಸದರಿ ಆಸ್ತಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಹೊನ್ನಪ್ಪ ತನ್ನ ಹೆಸರಿಗೆ ಖರೀದಿ ಪತ್ರ ಮಾಡಿಕೊಂಡಿದ್ದು, ಅದನ್ನು ಪ್ರತಿವಾದಿಯರು ಹಾಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೊನ್ನಪ್ಪ ತನ್ನ ಜೀವಿತಾವದಿಯಲ್ಲಿ ಸರ್ವೆ ನಂಬರು 3 ರ ಜಮೀನನ್ನು ತನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ಪ್ರತಿವಾದಿಯರು ಹಾಜರು ಪಡಿಸಿರುತ್ತಾರೆ ಎಂದರೆ ಸರಿ. ವಿಭಾಗದಂತೆ ಹೊನ್ನಪ್ಪ ರವರ ಮಕ್ಕಳು ತಮ್ಮ ತಮ್ಮ ಪಾಲಿನ ಆಸ್ತಿಯ ಪ್ರತ್ಯೇಕ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಹೊನ್ನಪ್ಪ 60 ವರ್ಷಗಳ ಹಿಂದೆಯೇ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ನೀವು, ನಿಮ್ಮ ತಂದೆ ಅಥವಾ ತಾತ ಈ ವರೆಗೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಯು ನನ್ನ ತಂದೆಯ ಪಾಲಿಗೆ ಹೋಗಿರುತ್ತದೆ ಎಂದು ನನ್ನ ತಾತ ಕ್ರಿಮಿನಲ್ ಪ್ರಕರಣದಲ್ಲಿ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಾತ ನಿಖರವಾಗಿ ಯಾವಾ ದಿನಾಂಕದಂದು ಬರೆದುಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ, ಆದರೆ ಈಗ ಸುಮಾರು 15 ವರ್ಷಗಳು ಆಗಿರಬಹುದು. ಆ ರೀತಿ ನನ್ನ ತಾತ ಬರೆದುಕೊಟ್ಟ ದಾಖಲೆಯನ್ನು ನಾವು ಈ ದಾವೆಯಲ್ಲಿ ಹಾಜರು ಮಾಡಿದ್ದೇವೆ. ಸದರಿ ದಾಖಲೆಯಲ್ಲಿ ಯಾರು-ಯಾರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಆಧಾರದ ಮೇಲೆ ನನ್ನ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯ ಪ್ರತಿಯನ್ನು ನಾವು ಹಾಜರು ಮಾಡಿದ್ದೇವೆ. ಈಗ 8-9 ವರ್ಷಗಳ ಹಿಂದೆ ನನ್ನ ತಂದೆ ಸದರಿ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿಯ ಮೇಲೆ ಯಾವ ಆದೇಶ ಆಗಿದೆ ಎಂದರೆ ಸಾಕ್ಷಿಯು ಅದರ ವಿಚಾರಣೆ ನ್ಯಾಯಾಲಯದಲ್ಲಿ ಈಗಲೂ ನಡೆಯುತ್ತಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ಸದರಿ ಅರ್ಜಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದರು.

6. ನನ್ನ ಮುತ್ತಜ್ಜ ಸಕ್ರಪ್ಪ ರವರಿಗೆ ಇಬ್ಬರು ಮಕ್ಕಳು ಇದ್ದರು. ನರಸಪ್ಪ ಮತ್ತು ಮಲ್ಲಪ್ಪ ಸದರಿ ಸಕ್ಕಪ್ಪ ರವರ ಮಕ್ಕಳು ಆಗಿರುತ್ತಾರೆ. ಹೊನ್ನಪ್ಪ, ರಾಮಣ್ಣ, ಲಕ್ಷ್ಮಣ ಮತ್ತು ಹಣಮಂತಪ್ಪ ರವರು ಸದರಿ ಮಲ್ಲಪ್ಪ ರವರ ಮಕ್ಕಳು ಆಗಿರುತ್ತಾರೆ. ಸದರಿ ಮಲ್ಲಪ್ಪ ರವರಿಗೆ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಗೆಜ್ಜಲಮ್ಮ, ಮಾಣಿಕಮ್ಮ ಮತ್ತು ಶಂಕ್ರಮ್ಮ ಸದರಿ ಹೆಣ್ಣು ಮಕ್ಕಳು ಆಗಿರುತ್ತಾರೆ. ನಮ್ಮ ಕುಟುಂಬದ ವಿಭಾಗದಲಿಲ ಮಲ್ಲಪ್ಪ ರವರ ಮಕ್ಕಳಿಗೆ ಬಂದಿರುವ ಜಮೀನುಗಳ ಸರ್ವೆ ನಂಬರುಗಳು ನನಗೆ ಗೊತ್ತಿಲ್ಲ. ಹೊನ್ನಪ್ಪ, ರಾಮಣ್ಣ ಹಣಮಂತಪ್ಪ ಮತ್ತು ಗೆಜ್ಜಲಮ್ಮ, ಮಾಣಿಕಮ್ಮ ಮತ್ತು ಶಂಕ್ರಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

7. ಹೊನ್ನಪ್ಪ ರವರ ಮಕ್ಕಳು ದಾವಾ ಸರ್ವೆ ನಂ.3 ರ ಮಾಲಿಕರು ಮತ್ತು ಕಬ್ಜೆದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಪಾಲಿಗೆ ಬಂದಿದೆ ಎಂಬುದನ್ನು ತೋರಿಸಲು ನಾವು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಮಾಲಿಕರು ಅಥವಾ ಕಬ್ಜೆದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಈ ವರೆಗೆ ನಿಮ್ಮ ತಂದೆಯ ಹೆಸರು ನಮೂದು ಆಗಿಲ್ಲ ಎಂದರೆ ಸಾಕ್ಷಿಯು ಅದೇ ಕಾರಣಕ್ಕೆ ದಾವೆ ದಾಖಲು ಮಾಡಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಅಸ್ತಿಯು ಹೊನ್ನಪ್ಪ ರವರ ಸ್ವಂತ ಆಸ್ತಿ ಆಗಿರು ವುದರಿಂದ ನಮಗೆ ಅದರಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಯನ್ನು ನುಂಗಿ ಹಾಕುವ ಉದ್ದೇಶದಿಂದ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಾಖಲೆಗಳನ್ನು ಹೊರತು ಪಡಿಸಿ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳ ದಾಖಲೆಗಳಲ್ಲಿ ನನ್ನ ಅಜ್ಜ ಮಲ್ಲಪ್ಪ ರವರ ಹೆಸರು ನಮೂದು ಇದೆ ಎಂದರೆ ಸರಿಯಲ್ಲ.

8. ನಿಪಿ-35 ರಲ್ಲಿನ ಸರ್ವೆ ನಂ.22/ಅ/2 ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ನೆನಪಿಲ್ಲ. ನಿಪಿ-34 ರಲ್ಲಿನ ಪಹಣಿ ಪತ್ರಿಕೆಯನ್ನು ನಾವು ಹಿಂದೆಯೇ ನಿಪಿ-21 ಎಂದು ಗುರುತಿಸಿಕೊಂಡಿದ್ದೇವು ಎಂದರೆ ನನಗೆ ಗೊತ್ತಿಲ್ಲ. ಎದುರು ಪಕ್ಷಗಾರರಿಗೆ ಗೊಂದಲ ಉಂಟು ಮಾಡಬೇಕೆನ್ನುವ ಉದ್ದೇಶದಿಂದ ಒಂದೆ ದಾಖಲೆಯನ್ನು ಎರಡು ಸಲ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-35 ರಲ್ಲಿನ ಪಹಣಿ ಪತ್ರಿಕೆಯನ್ನು ನಾವು ಹಿಂದೆಯೇ ನಿಪಿ-2 ಎಂದು ಗುರುತಿಸಿಕೊಂಡಿದ್ದೇವು ಎಂದರೆ ನನಗೆ ಗೊತ್ತಿಲ್ಲ.

ನಿಪಿ-36 ರಲ್ಲಿನ ಸರ್ವೆ ನಂ.25/ಇ ನನ್ನ ಅಜ್ಜ ಮಲ್ಲಪ್ಪನ ಹೆಸರಿನಲ್ಲಿ ಇದೆ. ನಿಪಿ-36 ರಲ್ಲಿನ ಪಹಣಿ ಪತ್ರಿಕೆಯನ್ನು ನಾವು ಹಿಂದೆಯೇ ನಿಪಿ-14 ಎಂದು ಗುರುತಿಸಿಕೊಂಡಿದ್ದೇವು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.25 ಇ ಜಮೀನು ಈ ವರೆಗೆ ನನ್ನ ಅಜ್ಜನ ಹೆಸರಿನಲ್ಲಿ ಇದೆ ಎಂದರೆ ಸರಿ. ನಿಪಿ-37 ರಲ್ಲಿನ ಸರ್ವೆ ನಂ.70/ಅ ಯಾರ ಹೆಸರಿನಲ್ಲಿ ಎಂಬುದು ನನಗೆ ಗೊತ್ತಿಲ್ಲ. ನಿಪಿ-37 ರಲ್ಲಿನ ಪಹಣಿ ಪತ್ರಿಕೆಯನ್ನು ನಾವು ಹಿಂದೆಯೇ ನಿಪಿ-15 ಎಂದು ಗುರುತಿಸಿಕೊಂಡಿದ್ದೇವು ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಗಿದೆ.)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ
ನ್ಯಾಯಾಧೀಶರು,ಯಾದಗಿರಿ.